ಸಿ.ಸಿ .ನಂ.212/2022                                        ಪಿಡಬ್ಲೂಃ 1

ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

6. ಆರೋಪಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ದಾಖಲಿಸುವಂತೆ ಕೇಳಿರುವ ಎಲ್ಲಾ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಯಾವ ದಾಖಲಾತಿಗಳು ಎಂದು ಹೇಳಬಹುದು ಎಂದು ನುಡಿದಿರುತ್ತಾರೆ . ನನ್ನ ಪಾಟೀ ಸವಾಲಿನಲ್ಲಿ ಯಾವ ಯಾವ ದಾಖಲಾತಿಗಳನ್ನು ಹಾಜರು ಪಡಿಸಬೇಕೆಂದು ಕೇಳಲಾಗಿತ್ತು , ಆ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಕೇಳಲಾಗಿತ್ತು. ಸಾಕ್ಷಿ ನ್ಯಾಯಾಲಯ ಕೇಳಿರುವ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ . ನನ್ನ ಇನಕಮ್ ಟ್ಯಾಕ್ಸ ಪ್ರತಿಯಲ್ಲಿ ಆರೋಪಿತನಿಗೆ ಸಾಲವನ್ನು ಕೊಟ್ಟಿರುವುದನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಅವರ ಹೆಸರನ್ನು ನಮೂದಿಸಿಲ್ಲ ಆದರೆ ಇಂತಿಷ್ಟು ಹಣ ಬರಬೇಕೆಂದು ನಮೂದಿಸಿದ್ದೇನೆ. ಆ ರೀತಿ ನ್ಯಾಯಾಲಯದ ಮುಂದೆ ಪ್ರಪ್ರಥಮವಾಗಿ ಸೃಷ್ಟಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ದಾಖಲಾತಿಗಳಲ್ಲಿರುವ ವ್ಯವಹಾರಕ್ಕೂ ಹಾಗೂ ಹಾಜರು ಪಡಿಸಿದ ದಾಖಲಾತಿಗಳಿಗೂ ಸಂಬಂಧವಿಲ್ಲ ಎಂದರೆ ಸಾಕ್ಷಿ ನನ್ನ ಕೈಯಲ್ಲಿರುವ ಹಣವನ್ನು ಅವರಿಗೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ . ಆ ದಿನ ನನ್ನ ಬಳಿ ಇಷ್ಟು ಹಣ ಇತ್ತು ಹಾಗೂ ಇಷ್ಟು ಹಣ ಹ್ಯಾಂಡ ಲೋನ್ ಆಗಿ ಕೊಟ್ಟಿದ್ದೇನೆ ಎಂದು ಕಾಯ್ದೆ ಪ್ರಕಾರ ಇನಕಮ್ ಟ್ಯಾಕ್ಸ ರಿಟರ್ನ್ಸನಲ್ಲಿ ಕಾಣಿಸಬೇಕು ಎಂದರೆ ಸಾಕ್ಷಿ ವರ್ಷಕ್ಕೆ ಎಷ್ಟು ಬರಬೇಕು ಅದನ್ನು ಕಾಣಿಸಿದ್ದೇನೆ ಎಂದು ನುಡಿದಿರುತ್ತಾರೆ . ಇನಕಮ್ ರಿಟರ್ನ್ಸನಲ್ಲಿ ಯಾವ ಕಾಲಂನಲ್ಲಿ ಇಂತಿಷ್ಟು ಹಣ ಬರಬೇಕು ಎಂದು ನಮೂದಿಸಿದ್ದೇನೆ ಎಂದು ನಮ್ಮ ಸಿಎ ರವರಿಗೆ ಕೇಳಬೇಕು. ನಮ್ಮ ಸಿಎ ರವರು ನಾನು ಕೊಟ್ಟ ಮಾಹಿತಿ ಪ್ರಕಾರ ನಮೂದಿಸಬೇಕೆ ಹೊರತು ಅವರ ಸ್ವಂತ ಬುದ್ಧಿಯಿಂದ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಇಂತಿಷ್ಟು ಹಣ ಬರಬೇಕು ಎಂದು ಹೇಳಿದ್ದೆ ಆದರೆ ಅವರು ಒಂದೇ ಮೊತ್ತವನ್ನು ಕಾಣಿಸಿದ್ದಾರೆ . ಇನಕಮ್ ಟ್ಯಾಕ್ಸ ರಿಟರ್ನ್ಸ ಸಲ್ಲಿಸುವ

ಪಿಡಬ್ಲೂಃ 1

ಪೂರ್ವದಲ್ಲಿ ಇನ್ನೊಂದು ಆದಾಯ ಮತ್ತು ವೆಚ್ಚದ ಪ್ರತಿ ಇರುತ್ತದೆ , ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅದು ನನ್ನ ವೈಯಕ್ತಿಕ ಅವರು ಕೇಳಿದ ದಾಖಲಾತಿಯನ್ನು ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ . ಆರೋಪಿಗೆ ಸಾಲವನ್ನು ಕೊಟ್ಟಿದ್ದ ಹಣವನ್ನು ನಮೂದಿಸಿದ್ದು ಆಗಿದ್ದರೆ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆ . ಬುದ್ಧ್ಯಾಪೂರ್ವಕವಾಗಿ ಅದರಿಂದ ತಪ್ಪಿಸಿಕೊಳ್ಳಲು ಇನಕಮ್ ಟ್ಯಾಕ್ಸ ಪ್ರತಿಯನ್ನು ಮಾತ್ರ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ . ಬೇರೆ ಬೇರೆ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಹಣವನ್ನು ಆರೋಪಿಗೆ ಸಾಲ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಾವನಿಗೆ ಕೊಟ್ಟಂತಹ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಆರೋಪಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸುಳ್ಳು . ಯಾವುದೇ ರೀತಿಯ ಸಾಲವನ್ನು ಆರೋಪಿಗೆ ಕೊಡದೇ ಇದ್ದರೂ ಒಂದರ ಮೇಲೆ ಒಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ಕೊಟ್ಟ ಬಗ್ಗೆ ಯಾವುದೇ ದಾಖಲಾತಿ ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸಾಕ್ಷಿ ಚೆಕ್ ನ್ನು ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ . ಆರೋಪಿ ಈ ಚೆಕ್ ನ್ನು ನನಗೆ ಕೊಟ್ಟಿಲ್ಲ ಆದರೂ ಕೂಡ ಸುಳ್ಳನ್ನು ಸತ್ಯ ಪಡಿಸಲು ಪುನಃ ಪುನಃ ತಿರುಚುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.